ದಿನಾಂಕ 27-08-2019 ರಂದು ಪುನಃ ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಅಸಲು ದಾವೆ ನಂ.:96/2016
ಪಿಡಬ್ಲ್ಯೂ - 1

ದಿನಾಂಕ 27-08-2019 ರಂದು ಪುನಃ ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಬಿ.ಬಿ ವಕೀಲರಿಂದ.**

ನನ್ನ ತಂದೆಯ ಹೆಸರು ಸೈಯದ್ ಹುಸೇನಸಾಬ. ನನ್ನ ಅಜ್ಜ ಅಂದರೆ ನನ್ನ ತಂದೆಯ

ತಂದೆಯ ಹೆಸರು ಖಾಸಿಂಸಾಬ. ನನ್ನ ತಂದೆಗೆ ಸೊಫಿಸಾಬ ಮತ್ತು ರಾಜಾಸಾಬ ಎನ್ನುವ ತಮ್ಮಂದಿರು ಇದ್ದರು. ಚಾಂದಬೀ ಮತ್ತು ಖಾಸಿಂಬೀ ಎನ್ನುವವರು ನನ್ನ ತಂದೆಗೆ ಸಹೋದರಿಯರಾಗಬೇಕು ಈಗ ಖಾಸಿಂಬೀ ಮೃತ ಪಟ್ಟಿದ್ದಾಳೆ. ಖಾಸಿಂಬೀಗೆ ಗಂಡ ಮತ್ತು ಮಕ್ಕಳಿಲ್ಲ. ನನ್ನ ಮುತ್ಯನಿಗೆ ಸರಕಾರದವರು ದಾವಾ ಆಸ್ತಿಯನ್ನು ಗ್ರ್ಯಾಂಟ್ ಮಾಡಿದ್ದಾರೆ. ದಾವಾ ಆಸ್ತಿಯ ಸರ್ವೆ ನಂಬರ 7 ಮತ್ತು 3 ಇದೆ. ಈ ಮೊದಲು ದಾವಾ ಆಸ್ತಿಯ ಸರ್ವೆ ನಂಬರಿನಲ್ಲಿ 48 ಎಕರೆ ಜಮೀನು ಇತ್ತು. ನಾನು ಸಣ್ಣವನಿದ್ದಾಗ ದಾವಾ ಆಸ್ತಿಯ ಸರ್ವೆ ನಂಬರ ನನ್ನ ಅಣ್ಣ ಖಾಸಿಂಸಾಬನ ಹೆಸರಿನಲ್ಲಿತ್ತು. ಮೊದಲು ದಾವಾ ಸರ್ವೆ ನಂಬರ ನಮ್ಮ ಕಾಕ ರಾಜಾಸಾಬನ ಹೆಸರಿನಲ್ಲಿ ಮಂಜೂರಾಗಿತ್ತು ಅವನು ಸತ್ತ ನಂತರ ಅದನ್ನು ನಮ್ಮ ಅಣ್ಣ ಖಾಸಿಂಸಾಬನ ಹೆಸರಿನಲ್ಲಿ ವರ್ಗಾವಣೆ ಮಾಡಲಾಗಿದೆ. ನಮ್ಮ ಮುತ್ಯನ ಹೆಸರಿನಲ್ಲಿ ಜಮೀನು ಮಂಜೂರಿಯಾಗಿಲ್ಲ. ರಾಜಾಸಾಬನ ಹೆಸರಿನಲ್ಲಿ ಮಂಜೂರಾದ ತಕ್ಷಣ ಆತ ಮೃತಪಟ್ಟಿದ್ದಾನೆ. ದಾವಾ ಆಸ್ತಿಯಲ್ಲಿ ಎರಡು ಸರ್ವೆ ನಂಬರುಗಳಿವೆ. ದಾವಾ ಸರ್ವೆ ನಂಬರಿನಲ್ಲಿ ಈ ಮೊದಲು 300 ಎಕರೆ ಸರಕಾರಿ ಜಮೀನು ಇತ್ತು. ದಾವಾ ಸರ್ವೆ ನಂಬರ 37 ರಲ್ಲಿ ಒಟ್ಟು ವಿಸ್ತೀರ್ಣ 322 ಎಕರೆ 25 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ 37 ರಲ್ಲಿ 1 ನೇ ಪ್ರತಿವಾದಿಯ ತಂದೆ ಖಾಸಿಂಸಾಬನಿಗೆ ಸರಕಾರದವರು 21 ಎಕರೆ 39 ಗುಂಟೆ ಜಮೀನು ಗ್ರ್ಯಾಂಟ್ ಮಾಡಿದ್ದಾರೆ ಮತ್ತು ಅದಕ್ಕೆ ಸರ್ವೆ ನಂಬರ 37/2 ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ. ರಾಜಾಸಾಬ ಅಲಿಯಾಸ್ ರಾಜಅಹ್ಮದ್‌ನ ಹೆಸರಿನಲ್ಲಿ ಸರಕಾರದವರು ಇದೇ ಸರ್ವೆ ನಂಬರಿನಲ್ಲಿ 16 ಎಕರೆ 2 ಗುಂಟೆ ಜಮೀನು ಮಂಜೂರು ಮಾಡಿದ್ದಾರೆ ಎಂದರೆ ಸರಿ. ರಾಜಾಸಾಬನ ಹೆಸರಿನಲ್ಲಿ ಆದ ಜಮೀನು ಸರ್ವೆ ನಂಬರ 37/3 ಎಂದರೆ ಸರಿ. ಖಾಸಿಂಸಾಬ ಮತ್ತು ರಾಜಾಸಾಬ ಇವರ ಹೆಸರಿನಲ್ಲಿ ಜಮೀನು ಮಂಜೂರು ಮಾಡುವಾಗ ಆ ಜಮೀನುಗಳ ಸಿಕ್ಮಿದಾರ ಎಂದು ಸೋಫಿಸಾಬನ ಹೆಸರು ನಮೂದು ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸೊಫಿಸಾಬನು ಸಿಕ್ಮಿದಾರನಾಗಿರುವುದರಿಂದ ಅವನಿಗೂ ಕೂಡ ಖಾಸಿಂಸಾಬ ಮತ್ತು ರಾಜಾಸಾಬನ ಹೆಸರಿನಲ್ಲಿರುವ ಜಮೀನುಗಳಲ್ಲಿ ಪಾಲು ಇದೆ ಎಂದರೆ ಸಾಕ್ಷಿದಾರರು ಸೊಫಿಸಾಬನು ಮಕ್ಕಳಿಲ್ಲದೇ ತೀರಿಕೊಂಡಿದ್ದಾನೆ ಎನ್ನುತ್ತಾರೆ. ಸೊಫಿಸಾಬನಿಗೆ ಲಾಲ್‌ಬೀ ಅಲಿಯಾಸ್ ಮಕ್ತುಂಬೀ ಎನ್ನುವ ಹೆಂಡತಿ ಇದ್ದಳು ಈಗ ಆಕೆ ತೀರಿಕೊಂಡಿದ್ದಾಳೆ. ಸದರಿ ಮಕ್ತುಂಬೀ ದಾವಾ ಜಮೀನಿನಲ್ಲಿ ಪಾಲು ತೆಗೆದುಕೊಂಡಿದ್ದಾಳೆ ಎಂದರೆ ಸರಿ ಅಲ್ಲ ಆದರೆ ಆಕೆ ಜೀವಂತ ಇರುವವರೆಗೆ ದಾವಾ ಜಮೀನಿನಿಂದ ಬಂದ ಆದಾಯದಿಂದ ಊಟ ಮಾಡಿದ್ದಾಳೆ.

ರಾಜಾಸಾಬ ಮತ್ತು ಸೊಫಿಸಾಬ ಇವರು ದಾವಾ ಜಮೀನಿನ ಮೇಲೆ ಇರುವ ತಮ್ಮ ಪಾಲನ್ನು 1 ನೇ ಪ್ರತಿವಾದಿಯ ತಂದೆ ಖಾಸಿಂಸಾಬನಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ನಾವು ಸಣ್ಣವರಿದ್ದಾಗ ನಾವು ಮೂರು ಜನ ಅಣ್ಣ-ತಮ್ಮಂದಿರಿಗೆ ಹೋಗಬೇಕೆಂದು ಮಾಡಿದ್ದಾರೆ ಎಂದು ಸಾಕ್ಷಿದಾರರು ಉತ್ತರಿಸಿರುತ್ತಾರೆ. ಸೊಫಿಸಾಬ ಮತ್ತು ರಾಜಾಸಾಬ ಇವರು ತಮ್ಮ ಜಮೀನನ್ನು ಖಾಸಿಂಸಾಬನಿಗೆ ಬಿಟ್ಟು ಕೊಟ್ಟಿದ್ದಾರೆ ಸರಿ ಅಲ್ಲ. ಖಾಸಿಂಸಾಬನು 1986 ನೇ ಇಸವಿಯಲ್ಲಿ 8 ಎಕರೆ ಜಮೀನನ್ನು ಜಾನಪ್ಪಗೌಡ ಎನ್ನುವವರಿಗೆ ಮಾರ್ಟಗೇಜ್ ಮಾಡಿದ್ದಾನೆ ಎಂದರೆ ಸರಿ. 1984 ರಲ್ಲಿ ನಾನು ಮತ್ತು ನನ್ನ ಅಣ್ಣ ದಾವಲ್‌ಸಾಬ ಇಬ್ಬರೂ ಕೂಡಿ ಪ್ರತಿವಾದಿಯರ ತಂದೆ ಖಾಸಿಂಸಾಬ ಮತ್ತು ಮಕ್ತುಂಬೀಯ ವಿರುದ್ಧ ಸರ್ವೆ ನಂಬರ 37/2 ಮತ್ತು 37/3 ಕ್ಕೆ ಸಂಬಂಧಪಟ್ಟಂತೆ ಓ.ಎಸ್ ನಂಬರ 99/1989 ನ್ನು ಸಲ್ಲಿಸಿದ್ದೇವು ಎಂದರೆ ಸರಿ, ಸದರಿ ದಾವೆಯನ್ನು ನಾವು ಊರಲ್ಲಿ ರಾಜಿ ಮಾಡಿಕೊಂಡಿದ್ದೇವು ಖಾಸಿಂಸಾಬ ನಮಗೆ ಪಾಲು ಕೊಡುತ್ತೇನೆ ಎಂದು ಹೇಳಿದ್ದನು ಆದರೆ ಪಾಲು ಕೊಡದೆ ಸತ್ತಿದ್ದಾನೆ. ರಾಜಿ ಪ್ರಕಾರ ನಾನು ನನ್ನ ಅಣ್ಣ ನಮಗೆ ಬಂದ ಪಾಲಿನ ಜಮೀನಿನಲ್ಲಿ ಕಬ್ಜೆಯಲ್ಲಿದ್ದೇವೆ ಎಂದರೆ ಸರಿ. ಓ.ಎಸ್ ನಂಬರ 99/1989 ರಲ್ಲಿ ಜಾನಪ್ಪಗೌಡ ಪಕ್ಷಗಾರನಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ